ನಡೆಯುತ್ತಿದೆ. ಮೊನ್ನೆ ಪಾಕಿಸ್ತಾನದಲ್ಲಿ ಚುನಾವಣೆ ಗೆದ್ದು ಪ್ರಧಾನಿಯಾದ ಇಮ್ರಾನ್ ಖಾನ್ ವಿರೋಧ ಪಕ್ಷದ ನಾಯಕರಾಗಿದ್ದಾಗ ಗಾಂಧೀ ಮಾರ್ಗದಲ್ಲಿ ಪ್ರತಿಭಟನೆ ಮಾಡುತ್ತಿದ್ದರೆಂಬುದನ್ನು ಈಚೆಗೆ ಪತ್ರಕರ್ತರೊಬ್ಬರು ಗುರುತಿಸಿದ್ದಾರೆ. ಅತ್ತ ವಿಯೆಟ್ನಾಮಿನ ಕ್ರಾಂತಿಕಾರಿ ಕಮ್ಯುನಿಸ್ಟ್ ನಾಯಕ ಹೊ ಚಿ ಮಿನ್ ಕೂಡ 'ನಾನು ಹಾಗೂ ನನ್ನ ಸಂಗಾತಿಗಳು ಕ್ರಾಂತಿಕಾರಿಗಳಾದರೂ ನೇರವಾಗಿ ಅಥವಾ ಪರೋಕ್ಷವಾಗಿ ಗಾಂಧೀಜಿಯ ಶಿಷ್ಯರೇ' ಎಂದಿದ್ದು ಕೂಡ ಇಲ್ಲಿ ನೆನಪಾಗುತ್ತದೆ.

## 3

ಇಷ್ಟಾಗಿಯೂ, 'ಅಹಿಂಸಾತ್ಮಕವಾದ ಶಾಂತಿಯುತ ಚಳವಳಿ ತನ್ನ ಎದುರಾಳಿಯೂ ಅದೇ ನಿಯಮಗಳಿಗೆ ಬದ್ಧವಾಗಿ ನಡೆದುಕೊಂಡಾಗ ಮಾತ್ರ ಪರಿಣಾಮಕಾರಿಯಾಗಬಲ್ಲದು' ಎಂಬ ನೆಲ್ಸನ್ ಮಂಡೇಲರ ಅನುಭವದ ಮಾತಿನ ಹಿನ್ನೆಲೆಯಲ್ಲಿ ಗಾಂಧೀ ಮಾರ್ಗವನ್ನು ಇವತ್ತು ಮತ್ತೆ ಪರಿಶೀಲಿಸುವ ಅಗತ್ಯವಿದೆ. ಯಾಕೆಂದರೆ, ಅಹಿಂಸಾತ್ಮಕ ಹೋರಾಟ ಎದುರಾಳಿಯ, ಸರ್ಕಾರಗಳ ಹಾಗೂ ವ್ಯವಸ್ಥೆಯ ನಿರ್ದಯ ಹೃದಯವನ್ನು ಬದಲಿಸದಿದ್ದರೆ ಅಥವಾ ಕದಲಿಸದಿದ್ದರೆ, ಅದು ಒಂದು ಹೋರಾಟದ ಮಾರ್ಗವಾಗಿ ಸೋಲನ್ನಪ್ಪಬಹುದು. ಗಾಂಧೀ ಮಾರ್ಗವನ್ನನುಸರಿಸಿ ಐರೋಮ್ ಶರ್ಮಿಲಾ ಮಾಡಿದ ಹದಿನಾರು ವರ್ಷಗಳ ಉಪವಾಸ ಇಂಡಿಯಾದ ಅಂತಃಸಾಕ್ಷಿಯನ್ನು ಆಗಾಗ್ಗೆ ಚುಚ್ಚಿದರೂ, ಅದು ಕೊನೆಗೆ ಫಲ ಕೊಟ್ಟಿತೆ? ಐರೋಮ್ ಶರ್ಮಿಲಾ ಈಚೆಗೆ ಚುನಾವಣೆಗೆ ನಿಂತಾಗ ಯಾವ ಜನರಿಗಾಗಿ ಆಕೆ ಉಪವಾಸ ಮಾಡಿದರೋ ಅವರಲ್ಲಿನ ಒಂದು ಭಾಗ ಜನರಾದರೂ ಅವರಿಗೆ ವೋಟು ಹಾಕಲಿಲ್ಲವೇಕೆ? ಮೇಧಾ ಪಾಟ್ಕರ್ ನರ್ಮದಾ ಬಚಾವೋ ಆಂದೋಲನದಲ್ಲಿ ಭಾಗಿಯಾಗಿ, ಅಲ್ಲಿ ಪಲ್ಲಟಗೊಂಡ ಆದಿವಾಸಿಗಳ ಮರುವಸತಿಗಾಗಿ ಮಾಡಿದ ಸುದೀರ್ಘ ಉಪವಾಸ ಸತ್ಯಾಗ್ರಹ ಕೊನೆಗೂ ಸರ್ಕಾರಗಳ ಕ್ರೌರ್ಯ ಹಾಗೂ ಜನರ ಜಡತೆಯಿಂದಾಗಿ ವ್ಯರ್ಥವಾಯಿತು. ಅಂತಃಸಾಕ್ಷಿ ಸತ್ತು ಹೋದ ಸಮಾಜದಲ್ಲಿ ಗಾಂಧೀ ಮಾರ್ಗ ಹಿಮ್ಮೆಟ್ಟುತ್ತದೆಯೆ? ಈ ಪ್ರಶ್ನೆಗಳು ಕೂಡ ನಮ್ಮ ಮುಂದಿವೆ.

ಯಾಕೆಂದರೆ, ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಗಾಂಧೀಜಿಯ ಅಹಿಂಸೆಯ ಅಸ್ತ್ರದ ಎದುರು ವಸಾಹತುಕಾರರು ಮಣಿದಿದ್ದಕ್ಕೆ ಬ್ರಿಟನ್ ಅದೇ ಆಗ ಪ್ರಜಾಪ್ರಭುತ್ವದ ವಿಶಾಲ ನೈತಿಕ ನಿಯಮಗಳಿಗೆ ಸರಿಯಾಗಿ ಒಗ್ಗಿಕೊಳ್ಳುತ್ತಿದ್ದುದು ಕೂಡ ಒಂದು ಕಾರಣ. ಜೊತೆಗೆ ಬ್ರಿಟಿಷ್ ಇಂಡಿಯಾದ ನ್ಯಾಯಾಂಗ ವ್ಯವಸ್ಥೆಯಲ್ಲಿ ಒಂದು ಮಟ್ಟದ ಪಾಶ್ಚಾತ್ಯ ನಾಗರಿಕ ನೈತಿಕತೆಯೂ ಬೆರೆತಿದ್ದರಿಂದ, ಘನತೆಯುಳ್ಳ ಕೆಲವು ನ್ಯಾಯಾಧೀಶರು ಗಾಂಧೀಜಿಯ ಹೋರಾಟದಲ್ಲಿ ಸುಮ್ಮನೆ ತಪ್ಪು ಹುಡುಕಲು ಹೋಗಲಿಲ್ಲ. ಇಂಥ ಅಂಶಗಳು ವಸಾಹತುಕಾರ ಬ್ರಿಟಿಷರಲ್ಲಿ ಉಳಿದಿದ್ದ ಒಂದು ಬಗೆಯ ನೈತಿಕತೆಯನ್ನೂ ಸೂಚಿಸುತ್ತದೆ. ಯಾಕೆಂದರೆ, ಆ ಕಾಲದಲ್ಲಿ ದುರುಳ ಹಿಟ್ಲರ್ ಗಾಂಧಿಯನ್ನು ಹಾಗೂ ಇನ್ನು ಕೆಲವು ಕಾಂಗ್ರೆಸ್ ನಾಯಕರನ್ನು ಕೊಂದರೆ ಇಂಡಿಯಾದ ಸ್ವಾತಂತ್ರ್ಯ ಚಳವಳಿಯ ಕತೆ ಮುಗಿಯಿತು ಎಂದು ಬ್ರಿಟಿಷ್ ಸರ್ಕಾರಕ್ಕೆ 'ಕಿವಿಮಾತು' ಹೇಳಿದ್ದ. ಆದರೆ ಬ್ರಿಟಿಷ್ ಸರ್ಕಾರ ಅಷ್ಟು ಕ್ರೂರವಾಗಲಿಲ್ಲ. ಜೊತೆಗೆ, ಗಾಂಧೀಜಿಯ ವ್ಯಕ್ತಿತ್ವದ ಬಗೆಗೆ ಇದ್ದ ನೈತಿಕ ಭಯ, ಅವರಿಗೆ ಇದ್ದ ಜನಕೋಟಿಯ ಬೆಂಬಲ ಹಾಗೂ ಭಾರತೀಯರ ಸಂಘಟನಾತ್ಮಕ ಸ್ವಾತಂತ್ರ್ಯ ಹೋರಾಟದ ಶಕ್ತಿ ಕೂಡ ಬ್ರಿಟಿಷ್ ಸರ್ಕಾರವನ್ನು ಹಿಮ್ಮೆಟ್ಟಿಸಿತ್ತು.

ಈ ಎಲ್ಲದರ ನಡುವೆಯೂ, ಅಹಿಂಸೆಯನ್ನು ಪ್ರತಿಪಾದಿಸಿದ ಗಾಂಧಿ ಹಾಗೂ ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಥರದ ನಾಯಕರು ಕೊನೆಗೆ ಹಿಂಸೆಗೆ ಬಲಿಯಾದ ದುರಂತ